# ರಾಮಕೃಷ್ಣ ಸುದ್ದಿ ಸಂಚಯ

ESTD : 1994

**ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು**

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು-575 003.

Website : www.ramakrishnacredit.com Email : ho@ramakrishnacredit.com

GROWTH DRIVEN BY PERFORMANCE

ಸಂಪುಟ : III ಸಂಚಿಕೆ : 2 ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ ಜುಲೈ– ಸಪ್ಟೆಂಬರ್ 2017


## ಅಧ್ಯಕ್ಷರ ಮಾತು



**ಶ್ರೀ ಕೆ. ಜೈರಾಜ್ ಬಿ. ರೈ, ಅಧ್ಯಕ್ಷರು**

2016–17 ಸಾಲಿನ ಮಹಾಸಭೆಯು ದಿನಾಂಕ 17.09.2017 ರಂದು ಜರಗಿತು. ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಭಾಗವಹಿಸಿ ಮಹಾಸಭೆಯನ್ನು ಯಶಸ್ವೀಗೊಳಿಸಿರುವುದಕ್ಕೆ ಎಲ್ಲಾ ಸದಸ್ಯ ಬಾಂಧವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

2016–17ನೇ ಸಾಲಿನ ಪ್ರಗತಿಯನ್ನು ಗುರುತಿಸಿ ಎಸ್.ಸಿ.ಡಿ.ಸಿ.ಸಿ. ಬ್ಯಾಂಕ್ ಸಂಘಕ್ಕೆ 'ಸಾಧನಾ ಪ್ರಶಸ್ತಿ 2016–17'ನ್ನು ನೀಡಿ ಗೌರವಿಸಿರುವರು. ಈ ಪ್ರಶಸ್ತಿಯು ಸಂಘಕ್ಕೆ 6ನೇ ಬಾರಿ ದೊರಕಿದೆ. ಇದಕ್ಕೆ ಕಾರಣಕರ್ತರಾದ ಎಲ್ಲಾ ಸದಸ್ಯರಿಗೆ ಶಾಖಾ ಸಲಹಾ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರಿಗೆ ಹಾಗೂ ಸಿಬ್ಬಂದಿಗಳಿಗೆ ನನ್ನ ಹಾಗೂ ಆಡಳಿತ ಮಂಡಳಿಯ ಪರವಾಗಿ ವಿಶೇಷ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಸಂಘವು ಈ 2017–18ನೇ ಸಾಲಿನ ಮೊದಲ ಅರ್ಧವಾರ್ಷಿಕ ಅವಧಿಯಲ್ಲಿ ಅತ್ಯುತ್ತಮ ಪ್ರಗತಿ ಸಾಧಿಸಿದೆ ಎಂದು ತಿಳಿಸಲು ತುಂಬಾ ಹರ್ಷಪಡುತ್ತೇನೆ. ದಿನಾಂಕ 30.09.2017ಕ್ಕೆ ಸಂಘದ ಠೇವಣಿ ರೂ.145 ಕೋಟಿ, ಸಾಲ ಮತ್ತು ಮುಂಗಡ ರೂ.119 ಕೋಟಿ ಇದ್ದು ಒಟ್ಟು ವ್ಯವಹಾರವು ರೂ.264 ಕೋಟಿಯನ್ನು ಮೀರಿ ಸಾಧನೆ ಹಾದಿಯಲ್ಲಿ ಹೊಸ ಮೈಲಿಗಲ್ಲನ್ನು ದಾಟಿರುವುದು.

ಈ ಅರ್ಧವಾರ್ಷಿಕ ಅವಧಿಗೆ ಅತೀ ಹೆಚ್ಚು ನಿಗದಿತ ಗುರಿಗಳನ್ನು ಸಾಧಿಸಿ ಉತ್ತಮ ಪ್ರಗತಿ ಹೊಂದಿದ ಶಾಖೆಗಳಾದ ಉಪ್ಪಿನಂಗಡಿ ಮತ್ತು ವಿಟ್ಲಶಾಖೆಗಳನ್ನು ಅಭಿನಂದಿಸುತ್ತೇವೆ.

ಮುಂಬರುವ ಅವದಿಯಲ್ಲಿ, ಇನ್ನೂ ಹೆಚ್ಚಿನ ಮುತುವರ್ಜಿಯಿಂದ ಕರ್ತವ್ಯ ನಿರ್ವಹಿಸಿ, ಠೇವಣಿ ಮತ್ತು ಸಾಲ ವಿತರಣೆಯಲ್ಲಿ ಪ್ರಗತಿ ಹೊಂದಿರುವುದಲ್ಲದೆ, ಸಾಲ ವಸೂಲಾತಿ, ಲಾಭಗಳಿಕೆಯನ್ನು ಹೆಚ್ಚಿಸಿ ತಿಂಗಳುವಾರು ಗುರಿಗಳನ್ನು ಸಾಧಿಸಬೇಕಾಗಿ ಎಲ್ಲಾ ಶಾಖಾಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಈ ಮೂಲಕ ಕರೆ ನೀಡುತ್ತಿದ್ದೇನೆ.

**ಕೆ. ಜೈರಾಜ್ ಬಿ. ರೈ**
ಅಧ್ಯಕ್ಷರು

## ಸಂಘದ 23ನೇ ವಾರ್ಷಿಕ ಮಹಾಸಭೆ
## 2016–17ನೇ ಸಾಲಿಗೆ ಶೇ.23 ಡಿವಿಡೆಂಡ್




ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿಯ 23ನೇ ವಾರ್ಷಿಕ ಮಹಾಸಭೆ ದಿನಾಂಕ 17.09.2017ರಂದು ಸಂಘದ ಅಧ್ಯಕ್ಷ ಕೆ. ಜೈರಾಜ್ ಬಿ. ರೈ ಯವರ ಅಧ್ಯಕ್ಷತೆಯಲ್ಲಿ ಮಂಗಳೂರಿನ ಉರ್ವ ಸೆಂಟನರಿ ಚರ್ಚ್ ಹಾಲ್‌ನಲ್ಲಿ ಜರಗಿತು.

2016–17ನೇ ಸಾಲಿಗೆ ರೂ.4.03 ಕೋಟಿ ನಿವ್ವಳ ಲಾಭ ಗಳಿಸಿ ಸದಸ್ಯರ ಪಾಲು ಬಂಡವಾಳಕ್ಕೆ ಶೇ.23 ಡಿವಿಡೆಂಡನ್ನು ನೀಡುವುದೆಂದು ಮಹಾಸಭೆಯಲ್ಲಿ ನಿರ್ಧರಿಸಲಾಯಿತು.

ದ.ಕ. ಮತ್ತು ಉಡುಪಿ ಜಿಲ್ಲೆಯ ಕಾರ್ಯವ್ಯಾಪ್ತಿಯಲ್ಲಿ ಒಟ್ಟು 18 ಶಾಖೆಗಳನ್ನು ಹೊಂದಿ, ಪ್ರಸ್ತುತ ರೂ.141 ಕೋಟಿ ಠೇವಣಿ, ರೂ.116 ಕೋಟಿ ಹೊರಬಾಕಿ ಸಾಲದಿಂದ, ರೂ.257 ಕೋಟಿ ವ್ಯವಹಾರದೊಂದಿಗೆ, ನಿವ್ವಳ ಅನುತ್ಪಾದಕ ಆಸ್ತಿ ಶೂನ್ಯ ಪ್ರಮಾಣದಲ್ಲಿದ್ದು, ನಿರಂತರವಾಗಿ ಆಡಿಟ್‌ನಲ್ಲಿ "ಎ" ವರ್ಗೀಕರಣವನ್ನು ಸಂಘವು ಪಡೆದಿದೆ ಹಾಗೂ 2016–17ನೇ ಸಾಲಿನ ಸಂಘದ ಅಮೂಲಾಗ್ರ ಪ್ರಗತಿಯನ್ನು ಪರಿಗಣಿಸಿ ಎಸ್.ಸಿ.ಡಿ.ಸಿ.ಸಿ ಬ್ಯಾಂಕ್ ಕೊಡಮಾಡುವ ಪ್ರತಿಷ್ಠಿತ ಸಾಧನಾ ಪ್ರಶಸ್ತಿಯು ಸಂಘಕ್ಕೆ ಲಭಿಸಿದೆ, ಈ ಪ್ರಶಸ್ತಿಗೆ ಸಂಘವು ಆರನೇ ಬಾರಿಗೆ ಅರ್ಹವಾಗಿದೆ, ಪ್ರಸಕ್ತ ಸಾಲಿನಲ್ಲಿ ಪುತ್ತೂರಿನ ಕಡಬ ಮತ್ತು ಮಂಗಳೂರಿನ ಬಂದರಿನಲ್ಲಿ ಶೀಘ್ರದಲ್ಲಿ ಹೊಸ ಶಾಖೆಗಳನ್ನು ಆರಂಭಿಸಲಾಗುವುದು. ಅಲ್ಲದೆ ಮತ್ತೆರಡು ಹೊಸ ಶಾಖೆಗಳನ್ನು ತೆರೆಯಲು ಕ್ರಮವಿಡಲಾಗುವುದು ಮತ್ತು ನಾಲ್ಕು ಶಾಖೆಗಳನ್ನು ನವೀಕರಿಸಲು ಮತ್ತು ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿ ಕೊಳ್ಳುವ ಕಾರ್ಯಯೋಜನೆ ಹಮ್ಮಿಕೊಳ್ಳಲಾಗಿದೆ ಎಂದು ಅಧ್ಯಕ್ಷರಾದ ಕೆ. ಜೈರಾಜ್ ಬಿ. ರೈಯವರು ಸಭೆಗೆ ತಿಳಿಸಿದರು. ಸಂಘದ ಈ ಸರ್ವತೋಮುಖ ಪ್ರಗತಿಯನ್ನು ಶ್ಲಾಘಿಸಿದ ಸದಸ್ಯರು ಮುಂದಿನ ಸಾಲುಗಳಲ್ಲಿ ಇನ್ನೂ ಪ್ರಗತಿಯನ್ನು ಕಾಯ್ದು ಕೊಳ್ಳಲು ಹಾರೈಸಿದರು.

ಸಂಘದ ಉಪಾಧ್ಯಕ್ಷರಾದ ಶ್ರೀಮತಿ ಲಕ್ಷ್ಮಿ ಜಯಪಾಲ ಶೆಟ್ಟಿ ಹಾಗೂ ನಿರ್ದೇಶಕರುಗಳಾದ ಶ್ರೀಮತಿ ಎ. ರತ್ನಕಾಂತಿ ಶೆಟ್ಟಿ, ಡಾ| ಕೆ. ಸುಭಾಶ್ಚಂದ್ರ ಶೆಟ್ಟಿ, ಶ್ರೀ ಪಿ. ಶಿವರಾಮ ಅಡ್ಯಂತಾಯ, ಸಿಎ ಎಚ್.ಆರ್. ಶೆಟ್ಟಿ, ಶ್ರೀ ವಿಠಲ ಪಿ. ಶೆಟ್ಟಿ, ಶ್ರೀ ಎಂ. ಸೀತಾರಾಮ ಶೆಟ್ಟಿ, ಶ್ರೀ ಪಿ.ಬಿ. ದಿವಾಕರ ರೈ, ಶ್ರೀ ರವೀಂದ್ರನಾಥ ಜಿ. ಹೆಗ್ಡೆ, ಶ್ರೀ ಕೆ. ದಯಾಕರ್ ಆಳ್ವ, ಬೆಳ್ಳಿಪಾಡಿ ಶ್ರೀ ಪ್ರಸಾದ್‌ಕೌಶಲ್ ಶೆಟ್ಟಿ, ಡಾ| ಎಂ. ಸುಧಾಕರ ಶೆಟ್ಟಿಯವರು ಉಪಸ್ಥಿತರಿದ್ದರು.

ಪ್ರಭಾರ ಮಹಾಪ್ರಬಂಧಕರಾದ ಶ್ರೀ ಗಣೇಶ್ ಜಿ.ಕೆ.ಯವರು ಲೆಕ್ಕಪರಿಶೋಧಿತ ಆರ್ಥಿಕತಃಖ್ತೆ, ಲಾಭ ವಿಂಗಡನೆ, ಬಜೆಟ್, ಬೈಲಾ ತಿದ್ದುಪಡಿ ಪ್ರಸ್ತಾವನೆಗಳನ್ನು ಮಂಡಿಸಿದರು. ನಿರ್ದೇಶಕರಾದ ಶ್ರೀ ಕೆ. ಸೀತಾರಾಮ ರೈ ಸವಣೂರು ಸ್ವಾಗತಿಸಿ, ಶ್ರೀ ಎಂ. ರಾಮಯ ಶೆಟ್ಟಿಯವರು ವಂದಿಸಿದರು. ಸಿಬ್ಬಂದಿಗಳಾದ ಶ್ರೀ ಚಂದ್ರಹಾಸ್ ಶೆಟ್ಟಿ ಮತ್ತು ಶ್ರೀ ಪ್ರಶಾಂತ್ ಪಿ.ಎ.ಯವರು ಕಾರ್ಯಕ್ರಮ ನಿರೂಪಿಸಿದರು.

## 2017-18ನೇ ಸಾಲಿನ ಅರ್ಧವಾರ್ಷಿಕ ಅವಧಿ ದಿನಾಂಕ 30.09.2017ಕ್ಕೆ ಇದ್ದಂತೆ
## ಪ್ರಗತಿಯ ಪಕ್ಷಿನೋಟ

(ರೂ. ಕೋಟಿ)

| ಕ್ರಸಂ. | ಕಾರ್ಯ ವಿಭಾಗ | ಸಪ್ಟೆಂಬರ್ 2016ಕ್ಕೆ ಇದ್ದಂತೆ | ಸಪ್ಟೆಂಬರ್ 2017ಕ್ಕೆ ಇದ್ದಂತೆ | ಹೆಚ್ಚಳ (ರೂ) | ಶೇ. |
|---|---|---|---|---|---|
| 1 | ಠೇವಣಾತಿಗಳು | 133 | 145 | 13 | 9% |
| 2 | ಸಾಲ ಮತ್ತು ಮುಂಗಡ | 107 | 119 | 12 | 11% |
| 3 | ನಿವ್ವಳ ಅನುತ್ಪಾದಕ ಆಸ್ತಿ | Nil | Nil | Nil | |
| 4 | ಒಟ್ಟು ವ್ಯವಹಾರ | 239 | 264 | 25 | 10% |

## ಬಿ.ಸಿ.ರೋಡ್ ಶಾಖಾ ನವೀಕೃತ ಹವಾನಿಯಂತ್ರಿತ ಕಛೇರಿ ಉದ್ಘಾಟನೆ ಹಾಗೂ ಸಂಘದ ಮಾಜಿ ನಿರ್ದೇಶಕ, ಬಿ.ಸಿ.ರೋಡ್ ಶಾಖಾ ಸಲಹಾ ಸಮಿತಿಯ ಮಾಜಿ ಅಧ್ಯಕ್ಷ ಡಾ। ಎನ್. ಕರುಣಾಕರ ಶೆಟ್ಟಿಯವರಿಗೆ ಗೌರವಾರ್ಪಣೆ





ಸಂಘದ ಬಿ.ಸಿ.ರೋಡ್ ಶಾಖೆಯ ವಿಸ್ತೃತ ಹವಾನಿಯಂತ್ರಿತ ನವೀಕೃತ ಕಛೇರಿಯನ್ನು ದಿನಾಂಕ 24.08.2017ರ ಗುರುವಾರದಂದು ಶಾಖಾ ಕಟ್ಟಡ ಮಾಲಕರಾದ ಡಾ। ಎನ್. ಕರುಣಾಕರ ಶೆಟ್ಟಿ ಉದ್ಘಾಟಿಸಿದರು. ಸಂಘದ ಅಧ್ಯಕ್ಷ ಕೆ.ಜೈರಾಜ್ ಬಿ. ರೈಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷೆ ಶ್ರೀಮತಿ ಲಕ್ಷ್ಮಿ ಜಯಪಾಲ್ ಶೆಟ್ಟಿ, ನಿರ್ದೇಶಕ ಸವಣೂರು ಸೀತಾರಾಮ ರೈ ಶುಭ ಹಾರೈಸಿದರು.

1996ರಿಂದ 2004ರವರೆಗೆ 8 ವರ್ಷ ಕಾಲ ಸಂಘದ ಬಿ.ಸಿ. ರೋಡ್ ಶಾಖಾ ಸಮಿತಿ ಅಧ್ಯಕ್ಷರಾಗಿ, ಸಂಘದ ನಿರ್ದೇಶಕರಾಗಿ, ಸಂಘದ ಓರ್ವ ಆಪ್ತ ಹಿತೈಷಿಯಾಗಿ, ಸಂಘದ ಬಿ.ಸಿ.ರೋಡ್ ಶಾಖೆಯ ಶ್ರೇಯೋಭಿವೃದ್ಧಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ ಬಂಟ್ವಾಳದ ಜನಪ್ರಿಯ ವೈದ್ಯ ಡಾ। ಎನ್. ಕರುಣಾಕರ ಶೆಟ್ಟಿಯವರನ್ನು ಸಂಘದ ಪರವಾಗಿ, ಸಂಘದ ಅಧ್ಯಕ್ಷರು ಹಾಗೂ ನಿರ್ದೇಶಕರುಗಳು ಶಾಲು ಹೊದಿಸಿ, ಫಲಪುಷ್ಪ, ನೆನಪಿನ ಕಾಣಿಕೆಗಳನ್ನು ನೀಡಿ ಆತ್ಮೀಯವಾಗಿ ಅಭಿಮಾನಪೂರ್ವಕ ಸಮ್ಮಾನಿಸಲಾಯಿತು. ನಿರ್ದೇಶಕ ಡಾ। ಕೆ.ಸುಭಾಶ್ಚಂದ್ರ ಶೆಟ್ಟಿ, ಸಿ.ಎ.ಎಚ್.ಆರ್. ಶೆಟ್ಟಿ, ವಿಠಲ ಪಿ.ಶೆಟ್ಟಿ, ರವೀಂದ್ರನಾಥ ಜಿ. ಹೆಗ್ಡೆ, ಕೆ. ದಯಾಕರ ಆಳ್ವ, ಬೆಳ್ಳಿಪಾಡಿ ಪ್ರಸಾದ್ ಕೌಶಲ್ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ಬಿ.ಸಿ.ರೋಡ್ ಶಾಖೆಯ ಉಸ್ತುವಾರಿ ನಿರ್ದೇಶಕ ಡಾ। ಎಂ.ಸುಧಾಕರ ಶೆಟ್ಟಿ ಸ್ವಾಗತಿಸಿದರು. ಶಾಖಾಧಿಕಾರಿ ಮಹಾಬಲ ಶೆಟ್ಟಿ ಪ್ರಸ್ತಾವನೆ ಗೈದರು. ಸಂಘದ ಪ್ರಭಾರ ಮಹಾಪ್ರಬಂಧಕ ಗಣೇಶ್‌ಜಿ.ಕೆ. ವಂದಿಸಿದರು.



ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಮಂಗಳೂರು ಇವರು ದಿನಾಂಕ 01.09.2017ರಂದು ಜರಗಿದ ಬ್ಯಾಂಕಿನ ಮಹಾಸಭೆಯಲ್ಲಿ, ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿಯು ಸಾಧಿಸಿದ ಸರ್ವತೋಮುಖ ಪ್ರಗತಿಯನ್ನು ಪರಿಗಣಿಸಿ, ಸಂಘಕ್ಕೆ 'ಸಾಧನಾ ಪ್ರಶಸ್ತಿ 2016-17' ನ್ನು ನೀಡಿ ಗೌರವಿಸಿತು. ಎಸ್.ಸಿ.ಡಿ.ಸಿ.ಸಿ ಬ್ಯಾಂಕಿನ ಅಧ್ಯಕ್ಷರಾದ ಡಾ। ಎಂ.ಎನ್. ರಾಜೇಂದ್ರ ಕುಮಾರ್‌ರವರು, ಸಂಘದ ಅಧ್ಯಕ್ಷರಾದ ಶ್ರೀ ಕೆ.ಜೈರಾಜ್ ಬಿ. ರೈ ಮತ್ತು ಪ್ರಭಾರ ಮಹಾಪ್ರಬಂಧಕರಾದ ಶ್ರೀ ಗಣೇಶ್ ಜಿ.ಕೆ.ಯವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರಾದ ಶ್ರೀ ಕೆ. ದಯಾಕರ ಆಳ್ವ, ಉಡುಪಿ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕ ಶ್ರೀ ಪ್ರವೀಣ್ ನಾಯಕ್ ಮತ್ತು ಎಸ್.ಸಿ.ಡಿ.ಸಿ.ಸಿ. ಬ್ಯಾಂಕಿನ ನಿರ್ದೇಶಕರುಗಳು ಉಪಸ್ಥಿತರಿದ್ದರು. ಸಂಘಕ್ಕೆ ಎಸ್.ಸಿ.ಡಿ.ಸಿ.ಸಿ. ಬ್ಯಾಂಕಿನ ಈ ಪ್ರಶಸ್ತಿ 6 ನೇ ಬಾರಿಗೆ ದೊರಕಿರುತ್ತದೆ.

## ವಿಟ್ಲ ಶಾಖಾ ನವೀಕೃತ ಹವಾನಿಯಂತ್ರಿತ ಕಛೇರಿ ಉದ್ಘಾಟನೆ



ಸಂಘದ ವಿಟ್ಲ ಶಾಖೆಯ ವಿಸ್ತೃತ ಹವಾನಿಯಂತ್ರಿತ ನವೀಕೃತ ಕಛೇರಿಯನ್ನು ದಿನಾಂಕ 31.08.2017ರಂದು ಸಂಘದ ಅಧ್ಯಕ್ಷರಾದ ಕೆ.ಜೈರಾಜ್ ಬಿ. ರೈಯವರು ಉದ್ಘಾಟಿಸಿದರು. ಶಾಖೆಯ ಸಲಹಾ ಸಮಿತಿ ಅಧ್ಯಕ್ಷ ಡಾ। ಎಚ್. ರಮಾನಂದ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಸಂಘದ ನಿರ್ದೇಶಕ ಸೀತಾರಾಮ ರೈ ಸವಣೂರು ಶುಭ ಹಾರೈಸಿದರು. ಶಾಖೆಯ ಗ್ರಾಹಕರ ಪರವಾಗಿ ಭಾಸ್ಕರ ಶೆಟ್ಟಿ ಮಾತನಾಡಿದರು. ನಿರ್ದೇಶಕರಾದ ಪಿ.ಎಸ್. ಅಡ್ಯಂತಾಯ, ಪ್ರಸಾದ್‌ಕೌಶಲ್ ಶೆಟ್ಟಿ, ಶಾಖಾ ಕಟ್ಟಡ ಮಾಲಕ ಪಿ.ಜಿ. ಜೋಸೆಫ್ ಉಪಸ್ಥಿತರಿದ್ದರು.

ಶಾಖೆಯ ಉಸ್ತುವಾರಿ ನಿರ್ದೇಶಕ ಕೆ. ದಯಾಕರ ಆಳ್ವ ಸ್ವಾಗತಿಸಿದರು. ಮಹಾಪ್ರಬಂಧಕ ಗಣೇಶ್ ಜಿ.ಕೆ. ವಂದಿಸಿದರು. ಶಾಖಾಧಿಕಾರಿ ದಿನೇಶ್ ಶೆಟ್ಟಿ ಪ್ರಸ್ತಾವನೆಗೈದರು. ಸಲಹಾ ಸಮಿತಿ ಸದಸ್ಯ ಚಂದ್ರಹಾಸ ಅಡಪ ಕಾರ್ಯಕ್ರಮ ನಿರೂಪಿಸಿದರು.

# ಮೂಡಬಿದ್ರಿ ಶಾಖೆಯ ಗ್ರಾಹಕ ಸಂಪರ್ಕ ಸಭೆ




ಸಂಘದ ಮೂಡಬಿದ್ರಿ ಶಾಖಯ ಗ್ರಾಹಕ ಸಂಪರ್ಕ ಸಭೆಯು 05.09.2017ರಂದು ಸಂಘದ ಅಧ್ಯಕ್ಷರಾದ ಕೆ.ಜೈರಾಜ್ ಬಿ. ರೈಯುವರು ಸಮಾರಂಭವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡುತ್ತಾ, ಮಂಗಳೂರಿನ ಬಂಟ್ಸ್ ಹಾಸ್ಟೆಲ್ ಬಳಿ 21 ಸೆಂಟ್ಸ್ ಜಾಗವನ್ನು ಕೇಂದ್ರ ಕಛೇರಿಗಾಗಿ ಖರೀದಿಸಲು, ಪುತ್ತೂರಿನ ಕಡಬ ಹಾಗೂ ಮಂಗಳೂರಿನ ಬಂದರಿನಲ್ಲಿ ಶಾಖೆ ತೆರೆಯಲು ನಿರ್ಧರಿಸಲಾಗಿದೆ. 25ನೇ ವರ್ಷಕ್ಕೆ 25 ಶಾಖೆಗಳನ್ನು ತೆರೆಯಲು ಯೋಜಿಸಿರುವುದಾಗಿ ಜೈರಾಜ್ ಬಿ. ರೈ ಹೇಳಿದರು.

ಈಗಾಗಲೇ 6 ಶಾಖೆಗಳಿಗೆ ಹವಾನಿಯಂತ್ರಣ ವ್ಯವಸ್ಥೆ ಕಲ್ಪಿಸಲಾಗಿದೆ. 2017–18ರಲ್ಲಿ ಮೂಡಬಿದ್ರಿ ಶಾಖೆಗೂ ಹವಾ ನಿಯಂತ್ರಣ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗುವುದು ಎಂದು ಭರವಸೆಯಿತ್ತರು.

ಸಂಘದ ನಿರ್ದೇಶಕ, ಮೂಡಬಿದ್ರಿ ಶಾಖಾ ಸಲಹಾ ಸಮಿತಿ ಅಧ್ಯಕ್ಷ ವಿಠಲ ಪಿ. ಶೆಟ್ಟಿಯವರು ಸಮಾರಂಭದ ಅಧ್ಯಕ್ಷತೆ ವಹಿಸಿ ಗ್ರಾಹಕರು ಸೊಸೈಟಿಯೊಂದಿಗೆ ಹೆಚ್ಚೆಚ್ಚು ವ್ಯವಹಾರ ನಡೆಸುವಂತೆ ಕೋರಿದರು. ಪ್ರಭಾರ ಮಹಾಪ್ರಬಂಧಕ ಗಣೇಶ್ ಜಿ.ಕೆ. ಶಾಖಾ ವ್ಯವಸ್ಥಾಪಕಿ ಶ್ರೀಮತಿ ನಿರ್ಮಲಾ ಪಿ. ಶೆಟ್ಟಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಗ್ರಾಹಕರಾದ ಪ್ರಫುಲ್ಲ ಶೆಟ್ಟಿ, ಜಿ.ಎಸ್. ಪುರಂದರ ಆಚಾರ್ಯ ಅನಿಸಿಕೆ ವ್ಯಕ್ತಪಡಿಸಿದರು. ಆಯ್ದ ಗ್ರಾಹಕರಿಗೆ ಸ್ಮರಣಿಕೆ ನೀಡಿಗೌರವಿಸಲಾಯಿತು.

ನಿಶಾದ ಶೆಟ್ಟಿ ಪ್ರಾರ್ಥನೆಗೈದರು. ಫ್ರಾಂಕಿ ಡಿ'ಸೋಜಾ ಸ್ವಾಗತಿಸಿದರು. ಶಾಖಾಧಿಕಾರಿ ನಿರ್ಮಲಾ ಪಿ. ಶೆಟ್ಟಿ ಧನ್ಯವಾದವಿತ್ತರು. ಕೆ.ವಿ. ರಮಣ್ ಕಾರ್ಯಕ್ರಮ ನಿರೂಪಿಸಿದರು.

# ಕುಂದಾಪುರ ಶಾಖೆಯ ಗ್ರಾಹಕ ಸಂಪರ್ಕ ಸಭೆ




ಸಂಘದ ಕುಂದಾಪುರ ಶಾಖೆಯ ಗ್ರಾಹಕರ ಸಮಾವೇಶ ಕುಂದಾಪುರದ ಆರ್.ಎನ್. ಶೆಟ್ಟಿ ಕಲ್ಯಾಣ ಭವನದ ಸಭಾಂಗಣದಲ್ಲಿ ನಡೆಯಿತು. ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ನಿರ್ದೇಶಕ ಹಾಗೂ ಕುಂದಾಪುರ ಶಾಖೆಯ ಶಾಖಾ ಸಲಹಾ ಸಮಿತಿ ಅಧ್ಯಕ್ಷರಾದ ಶ್ರೀ ಅರುಣ್ ಕುಮಾರ್ ಶೆಟ್ಟಿಯವರು ವಹಿಸಿದ್ದರು.

ಸಮಾವೇಶವನ್ನು ಉದ್ಘಾಟಿಸಿದ ಸಂಸ್ಥೆಯ ಅಧ್ಯಕ್ಷ ಕೆ.ಜೈರಾಜ್ ಬಿ. ರೈ ಸಂಸ್ಥೆ ಗ್ರಾಹಕರಿಗಾಗಿ ಕೈಗೊಂಡ ಹಲವು ಕ್ರಮಗಳನ್ನು ವಿವರಿಸಿದರಲ್ಲದೇ, ರೂಪಾಯಿ ಅಪಮೌಲ್ಯದ ಹೊರತಾಗಿಯೂ ಸಂಸ್ಥೆ ಉತ್ತಮವಾದ ಸಾಧನೆಗೈಯಲು ಗ್ರಾಹಕರೇ ಕಾರಣ ಎಂದರು. ಕುಂದಾಪುರದಲ್ಲಿ ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿಗೆ ಉತ್ತಮವಾದ ಬೆಂಬಲವಿದ್ದು ಇಲ್ಲಿ ಹಲವು ಆರ್ಥಿಕ ಸಂಸ್ಥೆಗಳಿದ್ದರೂ ನಮ್ಮ ಸಂಸ್ಥೆಯ ಸೇವೆಯನ್ನು ಪಡೆಯುವಲ್ಲಿ ಹೆಚ್ಚಿನ ಆದ್ಯತೆ ನೀಡಿದ ನಮ್ಮ ಗ್ರಾಹಕರು ಅಭಿನಂದನೀಯರು ಎಂದರು.

ವೇದಿಕೆಯಲ್ಲಿ ಬಂಟರ ಮಾತೃ ಸಂಘದ ಉಪಾಧ್ಯಕ್ಷರಾದ ಕೆಂಚನೂರು ಸೋಮಶೇಖರ ಶೆಟ್ಟಿ ಉಪಸ್ಥಿತರಿದ್ದು ಹಲವು ಸಲಹೆ ಸೂಚನೆಗಳನ್ನು ನೀಡಿದರು. ಸಂಘದ ಪ್ರಭಾರ ಮಹಾಪ್ರಬಂಧಕರು ಗಣೇಶ್ ಜಿ.ಕೆ ಮತ್ತು ಶಾಖಾಧಿಕಾರಿ ಧನಂಜಯ್ ಶೆಟ್ಟಿಗಾರ್ ವೇದಿಕೆಯಲ್ಲಿದ್ದರು. ಈ ಸಂದರ್ಭದಲ್ಲಿ ಕೋಟ ಸಿಎ ಬ್ಯಾಂಕ್, ಶೇಖರ್ ಎನ್. ಶೆಟ್ಟಿ, ಇಂದಿರಾ ರಾಘವೇಂದ್ರ, ಗೋಕುಲ್ ಬಾಳಿಗ, ಬಂಟರ ಸಂಘ ಕುಂದಾಪುರ ಇವರನ್ನು ಗೌರವಿಸಲಾಯಿತು.

ಶಾಖಾ ಸಲಹಾ ಸಮಿತಿ ಸದಸ್ಯರುಗಳಾದ ಜಯಕರ ಶೆಟ್ಟಿ ಸ್ವಾಗತಿಸಿ, ವೈ. ಸೀತಾರಾಮ ಶೆಟ್ಟಿ ವಂದಿಸಿದರು. ಸಂಘದ ಮಾಜಿ ಸಿಬ್ಬಂದಿ ರಾಜ್‌ರಾಮ್ ನಿರೂಪಿಸಿದರು.

## ಕರ್ನಾಟಕ ಇನ್ಸ್ಟಿಟ್ಯೂಟ್ ಆಫ್ ಕೋ–ಓಪರೇಟಿವ್ ಮೇನೇಜ್‌ಮೆಂಟ್ ಮೂಡಬಿದ್ರಿ ಇವರ ಶಿಕ್ಷಣಾರ್ಥಿಗಳಿಂದ ಸಂಘಕ್ಕೆ ಅಧ್ಯಯನ ಭೇಟಿ



ದಿನಾಂಕ 04.09.2017ರಂದು ಕರ್ನಾಟಕ ಇನ್ಸ್ಟಿಟ್ಯೂಟ್ ಆಫ್ ಕೋ–ಓಪರೇಟಿವ್ ಮೇನೇಜ್‌ಮೆಂಟ್ ಮೂಡಬಿದ್ರಿಯ 22 ಶಿಕ್ಷಣಾರ್ಥಿಗಳು, ಉಪನ್ಯಾಸಕಿ ಶ್ರೀಮತಿ ಬಿಂದು ಬಿ.ನಾಯರ್‌ರವರ ನೇತೃತ್ವದಲ್ಲಿ ಸಂಘಕ್ಕೆ ಭೇಟಿ ನೀಡಿ ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ಪಡಕೊಂಡರು.

## ಬಂಟರ ಯಾನೆ ನಾಡವರ ಮಾತೃ ಸಂಘದವರ ಶ್ರೀ ರಾಮಕೃಷ್ಣ ವಿದ್ಯಾ ಸಂಸ್ಥೆಗಳ ವಿದ್ಯಾರ್ಥಿ ನೋಟ್ ಪುಸ್ತಕ ಮುದ್ರಣದ ಬಾಬ್ತು ಸಂಘದ ವತಿಯಿಂದ ಪ್ರಯೋಜಕತ್ವ ಧನದ ಚೆಕ್ಕು ಹಸ್ತಾಂತರಿಸುವ ಕಾರ್ಯಕ್ರಮ



ಬಂಟರ ಯಾನೆ ನಾಡವರ ಮಾತೃ ಸಂಘ ಮಂಗಳೂರು ಇವರ ಆತಿಥ್ಯದಲ್ಲಿ ದಿನಾಂಕ 09.09.2017ರಂದು ಜರಗಿದ ಸಮಾರಂಭದಲ್ಲಿ ಶ್ರೀ ರಾಮಕೃಷ್ಣ ವಿದ್ಯಾ ಸಂಸ್ಥೆಗಳ ವಿದ್ಯಾರ್ಥಿ ನೋಟ್ ಪುಸ್ತಕದ ಮುದ್ರಣ ಬಾಬ್ತು ಸಂಘದ ವತಿಯಿಂದ ನೀಡಲಾದ ಪ್ರಾಯೋಜಕತ್ವ ಧನದ ಚೆಕ್ಕನ್ನು ಸಂಘದ ಅಧ್ಯಕ್ಷ ಶ್ರೀ ಕೆ.ಜೈರಾಜ್ ಬಿ. ರೈಯವರು ಬಂಟರ ಯಾನೆ ನಾಡವರ ಮಾತೃ ಸಂಘದ ಅಧ್ಯಕ್ಷ ಶ್ರೀ ಕೆ. ಅಜಿತ್‌ಕುಮಾರ್ ರೈ ಮಾಲಾಡಿಯವರಿಗೆ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷೆ ಶ್ರೀಮತಿ ಲಕ್ಷ್ಮಿ ಜಯಪಾಲ ಶೆಟ್ಟಿ, ನಿರ್ದೇಶಕರುಗಳಾದ ಡಾ। ಸುಭಾಶ್ಚಂದ್ರ ಶೆಟ್ಟಿ, ಶ್ರೀ ಪಿ.ಎಸ್. ಅಡ್ಯಂತಾಯ ಮತ್ತು ಶ್ರೀ ಕೆ.ಸೀತಾರಾಮ ಶೆಟ್ಟಿ ಹಾಗೂ ಬಂಟರ ಯಾನೆ ನಾಡವರ ಮಾತೃ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಅಭಿನಂದನೆಗಳು

ಸಂಘದ ನಿರ್ದೇಶಕರಾದ ಶ್ರೀ ಪ್ರಸಾದ್ ಕೌಶಲ್ ಶೆಟ್ಟಿ ಬೆಳ್ಳಿಪಾಡಿರವರು ಇಂಡಿಯನ್ ಹಾಸ್ಪಿಟಲ್ ಮತ್ತು ಹಾರ್ಟ್ ಇನ್ಸ್ಟಿಟ್ಯೂಟ್ ಇದರ ನಿರ್ದೇಶಕ ಸ್ಥಾನಕ್ಕೆ ಆಯ್ಕೆಯಾಗಿರುವುದಕ್ಕೆ ಹೃತ್ಪೂರ್ವಕ ಅಭಿನಂದನೆಗಳು.

## ಹುಟ್ಟು ಹಬ್ಬದ ಶುಭಾಶಯಗಳು

| ಸಿಬ್ಬಂದಿಗಳ ಹೆಸರು ಮತ್ತು ಶಾಖೆ | |
|---|---|
| ಶ್ರೀಮತಿ ಯಶೋಧ ನ್ಯಾಕ್, ಉಡುಪಿ | ಶ್ರೀ ಸಂತೋಷ್, ಕುಂದಾಪುರ |
| ಶ್ರೀ ಅಣ್ಣಪ್ಪ ಶೆಟ್ಟಿ, ಉಡುಪಿ | ಶ್ರೀಮತಿ ನಂದಿತಾ ಆಚಾರ್ಯ, ವೆಲೆನ್ಸಿಯಾ |
| ಶ್ರೀಮತಿ ಸವಿತಾ ಪೂಂಜಾ, ಮಂಗಳೂರು | |

## ಶ್ರದ್ಧಾಂಜಲಿ

ಈ ಅವಧಿಯಲ್ಲಿ ದೈವಾಧೀನರಾದ

- ಸಂಘದ ಮಾಜಿ ನಿರ್ದೇಶಕ ದಿ। ಎನ್. ರಾಮಕೃಷ್ಣ ರೈಯವರ ಧರ್ಮಪತ್ನಿ ಶ್ರೀಮತಿ ಗೋಪಿ ಆರ್. ರೈ,
- ಸಂಘದ ಹೆಬ್ರಿ ಶಾಖೆಯ ಶಾಖಾ ಸಲಹಾ ಸಮಿತಿಯ ಮಾಜಿ ಅಧ್ಯಕ್ಷರಾದ ಶ್ರೀ ಪ್ರಸನ್ನ ಬಲ್ಲಾಳ್,
- ಬೈಂದೂರು ಶಾಖೆಯ ಮುಖ್ಯ ವ್ಯವಸ್ಥಾಪಕರಾದ ಶ್ರೀ ಎಸ್. ಅಮರನಾಥ ಹೆಗ್ಡೆಯವರ ಮಾತೃಶ್ರೀಯವರಾದ ಶ್ರೀಮತಿ ಹೇಮಾ ಆರ್. ಹೆಗ್ಡೆರವರುಗಳ

ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಲಾಯಿತು. ಅಗಲಿದ ದಿವ್ಯ ಚೇತನಗಳಿಗೆ ಚಿರಶಾಂತಿ ಕೋರಿಕೊಂಡು, ಸಂಘದ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ.

Private Circulation only

**BOOK-POST**

**To,**

If not delivered please return to :

**SRI RAMAKRISHNA CREDIT CO-OP. SOCIETY LTD.**

2nd Floor, Amruthotsava Building, Bunts Hostel Circle, Mangalore - 575 003.